# "ಸಿಡ್ನಿ ಕನ್ನಡ ಸಂಘ–ರಜತ ಮಹೋತ್ಸವ ವೈಭವ"

ಸಾವಿರಾರು ದೀಪಗಳಿಂದ ಝಗಮಗಿಸುತ್ತಿರುವ ಮೈಸೂರು ಅರಮನೆಯ ಅಂಗಳದಲ್ಲಿ ಬಣ್ಣಬಣ್ಣದ ಉಡಿಗೆ ತೊಟ್ಟ ಮಕ್ಕಳಿಂದ  ಸುಂದರವಾದ ಹಾಡು,  ನೃತ್ಯ,ಕೋಲಾಟ ನಡೆಯುತ್ತಿದೆ. ಪ್ರೇಕ್ಷಕರು ಸಂಪೂರ್ಣ ತನ್ಮಯರಾಗಿ ನೋಡುತ್ತಾ ಕುಳಿತಿದ್ದಾರೆ. ಇದ್ದಕಿದ್ದಂತೆ ಸಭಾಂಗಣದಲ್ಲಿ ದೀಪಗಳು ಹತ್ತಿದವು. ಆಗಲೇ ಜನರಿಗೆ ಅರಿವಾಗಿದ್ದು, ತಾವು ಮೈಸೂರು ಅರಮನೆಯ ಅಂಗಳದಲ್ಲಲ್ಲ, ಮೈಸೂರಿನಿಂದ ದೂರ, ಬಹುದೂರದ ಸಿಡ್ನಿ ನಗರದ ಬೌಮನ್ ಸಭಾಂಗಣದಲ್ಲಿ ಕುಳಿತ್ತಿದ್ದೇವೆ ಎನ್ನುವುದು!



ಶನಿವಾರ, ಜುಲೈ ೨೬ರಂದು, ಸಿಡ್ನಿ ಕನ್ನಡ ಸಂಘ ವಿಜೃಂಭಣೆಯಿಂದ ತನ್ನ ಬೆಳ್ಳಿ ಹಬ್ಬವನ್ನು ಆಚರಿಸಿತು. ಈ ಸಂದರ್ಭಕ್ಕೆಂದೇ ಸಿಡ್ನಿಯ ಪ್ರತಿಭಾವಂತ ಕಲಾವಿದ ಶ್ರೀ ದಕ್ಷಿಣಾಮೂರ್ತಿ ಆಂಜನಪ್ಪನವರು ಕಲಾತ್ಮಕವಾಗಿ ರಚಿಸಿದ ದೀಪಾಲಂಕೃತ ಮೈಸೂರು ಅರಮನೆಯ ಅತಿ ಸುಂದರ ಹಿನ್ನೆಲೆ, ಕಾರ್ಯಕ್ರಮಕ್ಕೆ ಅತ್ಯಂತ **ವೈಭವ** ವಾಗಿ ಮೆರೆಗು ನೀಡಿತ್ತು. ಸಮಾರಂಭವೆಲ್ಲ ಮೈಸೂರು ಅರಮನೆಯಲ್ಲೇ ನಡೆದಂತೆ ಭಾಸವಾಗುತ್ತಿತು!




Hechevu Kannadada Deepa Dance



Mr Pranesh-Humorist

ಬೆಳ್ಳಿ ಹಬ್ಬಕ್ಕೆ ವಿಶೇಷ ಅತಿಥಿಗಳಾಗಿ ಆಗಮಿಸಿದ್ದ ಬೆಂಗಳೂರಿನ ದೇವತಾ ಬಿಲ್ಡರ್ಸ್ ನ ಶ್ರೀ ಆರಾಧ್ಯರ ಸಮ್ಮುಖದಲ್ಲಿ ರಜತ ಮಹೋತ್ಸವದ ಅಧ್ಯಕ್ಷರಾದ ಡಾ॥ಸಿದ್ದಲಿಂಗೇಶ್ವರ ಒರೆಕೊಂಡಿ ಹಾಗೂ ಕನ್ನಡ ಸಂಘದ ಅಧ್ಯಕ್ಷೆ ಡಾ॥ನಾಗಮ್ಮ ಪ್ರಕಾಶ್ ಅವರು ಬೆಳ್ಳಿ ಹಬ್ಬದ ಜ್ಯೋತಿಯನ್ನು ಬೆಳಗಿಸಿದರು.

ಭಾರತದ ಹೈ ಕಮಿಷನರ್ ಶ್ರೀಮತಿ ಸುಜಾತ ಸಿಂಗ್ ಅವರು ಈ ಶುಭ ಸಂದರ್ಭದಲ್ಲಿ ರಜತ ಮಹೋತ್ಸವದ ವಿಶೇಷ ಸ್ಮರಣಸಂಚಿಕೆಯನ್ನು ಬಿಡುಗಡೆ ಮಾಡಿದರು. ಸಿಡ್ನಿ ಕನ್ನಡಿಗರ ಉತ್ತಮ ಸಾಹಿತ್ಯಾಭಿರುಚಿಯನ್ನು ಬಿಂಬಿಸುವ ಈ ಸ್ಮರಣಸಂಚಿಕೆಯನ್ನು ಶ್ರೀ ಓಂಕಾರಸ್ವಾಮಿ ಗೊಪ್ಪೇನಳ್ಳಿ ಹಾಗೂ ಶ್ರೀಮತಿ ಗೀತಾ ಗೋಪೀನಾಥ್ ಅವರು ಬಹಳ ಆಸಕ್ತಿ ವಹಿಸಿ ಹೊರತಂದಿದ್ದಾರೆ. ತಮ್ಮ ಹಿತ–ಮಿತವಾದ ಭಾಷಣದಲ್ಲಿ ಶ್ರೀಮತಿ ಸುಜಾತ ಸಿಂಗ್ ಅವರು ತಂತ್ರಜ್ಞಾನ, ವಾಣಿಜ್ಯ, ಸಾಹಿತ್ಯ, ಕಲೆ, ಕ್ರೀಡೆ ಮುಂತಾದ ಹಲವಾರು ದಿಶೆಗಳಲ್ಲಿ ಕರ್ನಾಟಕದ ಯೋಗದಾನವನ್ನು ಬಣ್ಣಿಸುತ್ತಾ ಕನ್ನಡಿಗರನ್ನು ಅಭಿನಂದಿಸಿದರು.

ಆಸ್ಟ್ರೇಲಿಯಾದ ಮಲ್ಟಿಕಲ್ಚರ್ ಅಫೇರ್ಸ್ ಅಂಡ್ ಸೆಟೆಲ್ಮೆಂಟ್ ಸರ್ವಿಸಸ್ ವಿಭಾಗದ ಕಾರ್ಯದರ್ಶಿ ಶ್ರೀ ಲ್ಯಾರಿ ಫರ್ಗುಸನ್‌ವರು ರಜತೋತ್ಸವವನ್ನು ಆಚರಿಸುತ್ತಿರುವ ಕನ್ನಡ ಸಂಘವನ್ನು ಅಭಿನಂದಿಸಿದರು. ಅಂಕಿ–ಅಂಶಗಳನ್ನು ನೀಡುತ್ತಾ ಅವರು ಭಾರತಮೂಲದ ಜನ ಎಷ್ಟು ಸುಶಿಕ್ಷಿತರು, ಶಾಂತಿಪ್ರಿಯರು ಎಂದು ವರ್ಣಿಸಿದರು.

ಆಸ್ಟ್ರೇಲಿಯಾದ ಅಭಿವೃದ್ಧಿಯಲ್ಲಿ ಭಾರತೀಯರ ಹಾಗೂ ಕನ್ನಡಿಗರ ಸಹಯೋಗವನ್ನು ಉಲ್ಲೇಖಿಸಿದರು.

ಆಸ್ಟ್ರೇಲಿಯಾದ ಹಾಗೂ ವಿದೇಶದ ಕನ್ನಡ ಸಂಘಗಳಿಂದ ಮತ್ತು ಸಿಡ್ನಿಯ ಅನೇಕ ಗಣ್ಯವ್ಯಕ್ತಿಗಳಿಂದ ಕನ್ನಡ ಸಂಘಕ್ಕೆ ಬೆಳ್ಳಿ



Dashavathara Dance

ಹಬ್ಬದ ಅಭಿನಂದನಾ ಸಂದೇಶಗಳು ಬಂದಿದ್ದವು.

ರಜತ ಮಹೋತ್ಸವದ ಅಧ್ಯಕ್ಷರಾದ ಡಾ॥ಸಿದ್ದಲಿಂಗೇಶ್ವರ ಒರೆಕೊಂಡಿಯವರು ೨೫ ವರ್ಷಗಳಿಂದ ಕನ್ನಡ ಸಂಘದ ಸದಸ್ಯರಾಗಿದ್ದಾರೆ. ೧೯೮೫ರಲ್ಲಿ ಕೇವಲ ನಾಲ್ಕಾರು ಕುಟುಂಬಗಳ ಸದಸ್ಯತ್ವದೊಂದಿಗೆ ಪ್ರಾರಂಭವಾದ ಕನ್ನಡ ಸಂಘ, ಇಂದು ರಾಜ್ಯೋತ್ಸವ ಪ್ರಶಸ್ತಿ ವಿಜೇತ ಸಂಸ್ಥೆಯಾಗಿ ಬೆಳೆದು ಬಂದ ದಾರಿಯತ್ತ ನೋಟ ಹರಿಸಿದರು .

೨೦೦೪ ರಿಂದ ಎಶಿಯಾ ಪೆಸಿಫಿಕ್ ಕನ್ನಡ ಒಕ್ಕೂಟವೆಂಬ ವೇದಿಕೆಯಡಿಯಲ್ಲಿ ಈ ವಲಯದಲ್ಲಿರುವ ಮುಖ್ಯ ನಗರಗಳ ಕನ್ನಡಿಗರ ಮಧ್ಯೆ ಮೈತ್ರಿ ಬೆಸೆಯಲು ಹಾಗೂ ಕರ್ನಾಟಕದಿಂದ ಹಲವಾರು ಹೆಸರಾಂತ ಕಲಾವಿದರನ್ನು ಕರೆಸಿ ಈ ಎಲ್ಲಾ ನಗರಗಳಲ್ಲಿ ಅವರ ಕಲೆಯನ್ನು ಆನಂದಿಸಿ ಆದರಿಸುವಂತೆ ಮಾಡಲು ಸಿಡ್ನಿ ಕನ್ನಡ ಸಂಘ ವಹಿಸಿದ ಪ್ರಮುಖ ಪಾತ್ರದ ಬಗ್ಗೆ ವಿವರಿಸಿದರು. ಸಿಡ್ನಿಯ ಭಾರತೀಯ ಒಕ್ಕೂಟದ ಅಧ್ಯಕ್ಷರಾಗಿರುವ, ಕನ್ನಡದವರೇ ಆದ ಶ್ರೀ ರಾಜ್ ನಟರಾಜನ್ ಅವರು ಭಾರತೀಯ ಒಕ್ಕೂಟದ ಅಭಿವೃದ್ಧಿಯಲ್ಲಿ ಕನ್ನಡಿಗರ ಯೋಗದಾನ, ಕನ್ನಡಿಗರು ನೀಡಿರುವ ಮುಂದಾಳತ್ವವನ್ನು ಶ್ಲಾಘಿಸಿದರು. ಕನ್ನಡ ಸಂಘದ ಅಧ್ಯಕ್ಷೆ ಡಾ॥ನಾಗಮ್ಮ ಪ್ರಕಾಶ್ ಅವರು ಸಿಡ್ನಿಯ ಕನ್ನಡ ಶಾಲೆಗಳು, ಇಲ್ಲಿನ ಗ್ರಂಥಾಲಯಗಳಲ್ಲಿ ಕನ್ನಡ ಪುಸ್ತಕಗಳ ವಿತರಣೆ, ಯುವ ವೇದಿಕೆಯ ಸ್ಥಾಪನೆ, ಇತ್ಯಾದಿ ಸಂಘದ ಚಟುವಟಿಕೆಗಳನ್ನು ವಿವರಿಸಿ ಸಂಸ್ಥೆಯ ಬೆಳೆವಣಿಗೆಗೆ ನೆರೆವಾದ ಎಲ್ಲರಿಗೂ ಕೃತಜ್ಞತೆಗಳನ್ನು ಅರ್ಪಿಸಿದರು.

ಕರ್ನಾಟಕದ ಮುಖ್ಯಮಂತ್ರಿಗಳಾದ ಶ್ರೀ ಯಡ್ಯೂರಪ್ಪನವರ ಅಭಿನಂದನಾ ಸಂದೇಶವನ್ನು ಈ ಸಂದರ್ಭದಲ್ಲಿ ಅವರು ಸಭೆಗೆ ಓದಿ ತಿಳಿಸಿದರು.



M.D Pallavi -Singer



Souvenir Release
Souvenir Editor Onkaraswamy, Indian High Commissioner Mrs. Sujatha Singh, Souvenir Editor Geetha Gopinath, President Dr Nagamma




**Drama – Maduve, Maduve, Maduve**……..”

ಇದರ ನಂತರ ಸಭಿಕರು ಕಾತರದಿಂದ ಕಾಯುತ್ತಿದ್ದ ಸಾಂಸ್ಕೃತಿಕ ಕಾರ್ಯಕ್ರಮಗಳು ಶುರುವಾದವು. ಮೊದಲಿಗೆ ಸಿಡ್ನಿಯ ಕಲಾವಿದರಿಂದ ವೃಂದಗಾನ ಹಾಗೂ ಮಕ್ಕಳಿಂದ ನೃತ್ಯ ನಡೆಯಿತು. ಸಿಡ್ನಿಯ ಯುವ ವೇದಿಕೆಯ ಸದಸ್ಯೆಯರು ಅತ್ಯಂತ ಭಾವಪೂರ್ಣವಾಗಿ ದಶಾವತಾರ ನೃತ್ಯ ರೂಪಕವನ್ನು ಭರತನಾಟ್ಯದಲ್ಲಿ ನಿರೂಪಿಸಿದರು. ಪುಟ್ಟ ಪುಟ್ಟ ಬಾಲಕರನ್ನು ದಶಾವತಾರದ ಪಾತ್ರಗಳಂತೆ ಅಲಂಕರಿಸಿ ಅವರನ್ನು ನೃತ್ಯದಲ್ಲಿ ಬಳಸಿದ್ದು ಒಂದು ನೂತನ ಪ್ರಯೋಗವಾಗಿತ್ತು. ಸುಂದರ ಯುವತಿಯರ ಇನ್ನೊಂದು ತಂಡ ರಾಷ್ಟ್ರಕವಿ ಕುವೆಂಪುರವರ ‘ಜೈ ಭಾರತ ಜನನಿಯ ತನುಜಾತೆ’ ಹಾಡಿಗೆ ಸಂಯೋಜಿಸಿದ ನೃತ್ಯವೂ ಪ್ರೇಕ್ಷಕರ ಮೆಚ್ಚುಗೆ ಗಳಿಸಿತು.ಈ ಸಮಾರಂಭಕ್ಕೆಂದೇ ಕರ್ನಾಟಕದಿಂದ ಆಗಮಿಸಿದ ಶ್ರೀಮತಿ ಪಲ್ಲವಿ ಅರುಣ್



Dignitaries and Sydney Kannada Sangha Executive Committee

ಹಾಗೂ ಖ್ಯಾತ ಹಾಸ್ಯಗಾರ ಶ್ರಿ ಗಂಗಾವತಿ ಪ್ರಾಣೇಶ್ ಕಾರ್ಯಕ್ರಮವನ್ನು ಮತ್ತಷ್ಟು ರಂಗೇರಿಸಿದರು. ಗಂಗಾವತಿ ಬೀಚಿಯೆಂದು ಪ್ರಸಿದ್ಧರಾಗಿರುವ ಶ್ರೀ ಪ್ರಾಣೇಶ್ ವೇದಿಕೆಯನ್ನೇರಿದಾಗ, ಈಗಾಗಲೇ ಅವರ ಮಾತಿನ ರುಚಿಯನ್ನು ಟಿವಿಯಲ್ಲಿ, ಸಿಡ್ನಿ ಕನ್ನಡ ರೇಡಿಯೋದ ಸಂದರ್ಶನದಲ್ಲಿ ಕೇಳಿ ಆನಂದಿಸಿದ ಜನಕ್ಕೆ  ಅವರ ಪರಿಚಯದ ಅಗತ್ಯವೇ ಇಲ್ಲದಷ್ಟು ಆತ್ಮೀಯರಾಗಿಬಿಟ್ಟಿದ್ದರು! ಸಿಡ್ನಿಗೆ ಬರುವಾಗ ವಿಮಾನಯಾನದ ತಮ್ಮ ಅನುಭವಗಳನ್ನು ರಸವತ್ತಾಗಿ ಬಣ್ಣಿಸುತ್ತ, ಶ್ರೀ ಪ್ರಾಣೇಶ್ ಸಭಿಕರನ್ನು ನಗೆಗಡಲಿನಲ್ಲಿ ಮುಳುಗಿಸಿದರು. ಅನುದಿನದ ಸಾಮಾನ್ಯ ಸಂದರ್ಭಗಳಲ್ಲೂ ಹಾಸ್ಯ ಹೇಗೆ ಅಡಗಿರುತ್ತದೆ ಎಂದು ವಿವರಿಸುತ್ತ ಅವರು ಹಲವಾರು ಉದಾಹರಣೆಗಳೊದಿಗೆ ನಿರೂಪಿಸಿದರು. ಇಡೀ ರಾತ್ರಿ ನಡೆದ ಒಂದು ಸಂಗೀತ ಸ್ಪರ್ಧೆಗೆ ತಾವು ಅನಿವಾರ್ಯವಾಗಿ ತೀರ್ಪುಗಾರರಾಗಬೇಕಾದ ಅಸಹಾಯಕತೆಯನ್ನು ಪ್ರಾಣೇಶ್ ಸಭಿಕರಲ್ಲಿ ಹೇಳಿಕೊಳ್ಳುತ್ತಿದ್ದರೆ, ಜನ ಸ್ವಲ್ಪವೂ ಕನಿಕರವಿಲ್ಲದೆ ಬಿದ್ದು, ಬಿದ್ದು ನಗುತ್ತಿದ್ದರು! ಮುದುಕಿಯೊಬ್ಬಳ "ಒಂದು ದಳದ ಕಮಲದಲ್ಲಿ" ಎಂದು ಶುರುವಾದ ಅಪಸ್ವರದ ಪ್ರಾರ್ಥನೆ ಮುಗಿಯುವ ಸೂಚನೆಯೇ ಸಿಗದೆ ತಾವು ಗಾಭರಿಗೊಂಡ ಸನ್ನಿವೇಶವನ್ನು ಪ್ರಾಣೇಶ್ ವಿವರಿಸಿದಾಗಲಂತೂ ಇಡೀ ಸಭಾಂಗಣ ನಗೆಗಡಲಿನಲ್ಲಿ ತೇಲಿಹೋಯಿತು.



The Artist  Mr Murthy honored By Brad Headford



Jai Baratha Jananeya Thanujathe Dance



M.D Pallavi Honored by Councilor Kathy Collins



Mr Pranesh Honored by Dept Of Immigration Representative

ಜನರಿಗೆ ಒಂದೆಡೆ  ಪ್ರಾಣೇಶರ ಹಾಸ್ಯ ಚಟಾಕಿಗಳನ್ನು ಇನ್ನಷ್ಟು ಸವಿಯುವ ಆಸೆಯಾದರೆ, ಇನ್ನೊಂದೆಡೆ ಪಲ್ಲವಿಯವರ ಗಾನಸುಧೆಯನ್ನು ಯಾವಾಗ ಸವಿದೇವೋ ಎಂಬ ತವಕ. ಒಲ್ಲದ ಮನಸ್ಸಿನಿಂದಲೇ ಪ್ರಾಣೇಶರನ್ನು ಬೀಳ್ಕೊಟ್ಟನಂತರ ಪಲ್ಲವಿಯವರನ್ನು ವೇದಿಕೆಗೆ ಆಹ್ವಾನಿಸಿದರು ನಿರೂಪಕರು.

"ಅಜ್ಂನಿರ್ವಿಕಲ್ಪಂ" ಎಂಬ ಗಣೇಶಸ್ತುತಿಯೊಡನೆ ತಮ್ಮ ಕಾರ್ಯಕ್ರಮವನ್ನು ಭವ್ಯವಾಗಿ ಪ್ರಾರಂಭಿಸಿದರು ಪಲ್ಲವಿ. ಅಲ್ಲಿಂದ ವೊದಲಾಯ್ತು ಸಿಡ್ನಿ ಕನ್ನಡಿಗರಿಗೆ ಪಲ್ಲವಿಯವರ ಸಿರಿಗಾನದ ರಸದೌತಣ. ಕುವೆಂಪುರವರ "ಇಳಿದು ಬಾ ತಾಯಿ"ಕವನವನ್ನು ಮನದುಂಬಿ, ಭಾವತುಂಬಿ ಹಾಡಿದಾಗ ಸಭಿಕರ " ವನ್ಸ್ ವೋರ್" ಕೋರಿಕೆ ಸಹಜವೇ ಆಗಿತ್ತು. ಪಲ್ಲವಿ ಚಿಕ್ಕವಯಸ್ಸಿನವರಾದರೂ ಅವರ ಮಾತಿನಲ್ಲಿ, ಕವನಗಳ ಆಯ್ಕೆಯಲ್ಲಿ, ಪ್ರತಿ ಕವನವನ್ನೂ ಅವರು ಪರಿಚಯಿಸುತ್ತಿದ್ದ ರೀತಿಯಲ್ಲಿ ಪ್ರಬುದ್ಧತೆ ಎದ್ದು ಕಾಣುತಿತ್ತು. ಕನ್ನಡದ ಪ್ರಖ್ಯಾತ ಕವಿಗಳಾದ ಬೇಂದ್ರೆ, ಅಡಿಗ, ನರಸಿಂಹಸ್ವಾಮಿ, ಪು.ತಿ.ನ, ಲಕ್ಷ್ಮೀನಾರಾಯಣ ಭಟ್ಟರ ಕವನಗಳನ್ನು ತಮ್ಮ ಇನಿದನಿಯಲ್ಲಿ ನಿರಾಯಸವಾಗಿ ಹಾಡಿದರು ಪಲ್ಲವಿ. ನಗುನಗುತ್ತಾ ಪ್ರೇಕ್ಷಕರೊಂದಿಗೆ ಮಾತನಾಡುತ್ತ ಒಂದು ಸ್ನೇಹಮಯ ವಾತಾವರಣವನ್ನು ಸೃಸ್ಟಿಸಿದರು.







ಕರ್ನಾಟಕದಲ್ಲಿ ಮನೆ ಮಾತಾಗಿರುವ ಹಿರಿಯ ಕಲಾವಿದ ಶ್ರೀ ಎ.ಸ್. ಮೂರ್ತಿಯವರ ಮೊಮ್ಮಗಳಾದ ಪಲ್ಲವಿ ತನ್ನ ಪ್ರೀತಿಯ ತಾತನ ನಾಟಕದ ಹಾಡಿನೊಂದಿಗೆ ತಮ್ಮ ಕಾರ್ಯಕ್ರಮವನ್ನು ಮುಗಿಸಿದರು.




Group song by Ram Koduva group

ಹಾಡಿಗೆ ಬೇಕಾದ ಪಕ್ಕವಾದ್ಯಗಳೆಲ್ಲ ಲ್ಯಾಪ್ ಟಾಪ್ನಲ್ಲಿ ಅಡಗಿದ್ದು, ನಿಜವಾದ ವಾದ್ಯವೃಂದದ ಕೊರತೆ ಬಹುಶಃ ಪಲ್ಲವಿಯವರನ್ನು ಕಾಡಿರಬಹುದು. ಆದರೆ ಅವರ ಹಾಡಿನ ಮೋಡಿಗೆ ಮಾರುಹೋದ ಸಿಡ್ನಿ ಕನ್ನಡಿಗರಿಗೆ ಅದೇನು ವಿಶೇಷ ಕೊರತೆಯಾಗಿ ಕಂಡಿರಲಾರದು. ಜುಲೈ ತಿಂಗಳ ಕೊರೆಯುವ ಚಳಿಯಲ್ಲಿ ಮಧ್ಯರಾತ್ರಿಯವರೆಗೂ ಜನ ಅಲ್ಲಾಡದೆ ಕುಳಿತಿದ್ದೇ ಇದಕ್ಕೆ ಸಾಕ್ಷಿ.



ಸಂಘದ ಉಪಾಧ್ಯಕ್ಷೆ ಶ್ರೀಮತಿ ಗೀತಾ ಗೋಪಿನಾಥ್ ರವರ ವಂದನಾರ್ಪಣೆಯನಂತರ, ಕನ್ನಡದ ಕವಿ ಶ್ರೀ ನಿಸಾರ್ ಅಹಮದ್‌ರವರ "ನಿತ್ಯೋತ್ಸವ" ಗೀತೆಯನ್ನು ಸಂಘದ ಸದಸ್ಯರು ಪಲ್ಲವಿ, ಪ್ರಾಣೇಶ್ ಹಾಗೂ ಸಿಡ್ನಿಯ ಕಲಾವಿದೆ ಶ್ರೀಮತಿ ಪುಷ್ಪಾ ಜಗದೀಶ್ ಮತ್ತು ಇತರ ಗಾಯಕರೊಂದಿಗೆ ವೃಂದಗಾನ ಹಾಡಿ, ಕನ್ನಡ ತಾಯಿಗೆ ನಿತ್ಯೋತ್ಸವ ಸಲ್ಲಿಸುವುದರೊಂದಿಗೆ ರಜತ ವೈಭವದ ಬೆಳ್ಳಿ ತೆರೆ ನಿಧಾನವಾಗಿ ಕೆಳಗಿಳಿಯಿತು.
ಎಶಿಯಾ ಪೆಸಿಫಿಕ್ ಕನ್ನಡ ಒಕ್ಕೂಟದ ವೇದಿಕೆಯಡಿಯಲ್ಲಿ ಈ ಕಲಾವಿದರು ಆಡಿಲೇಡ್, ಮೆಲ್ಬೋರ್ನ್ ಮತ್ತು ಸಿಂಗಪುರ ನಗರಗಳಲ್ಲಿ ಕಾರ್ಯಕ್ರಮ ನೀಡಲಿದ್ದಾರೆ.

ಆನು ಶಿವರಾಂ

ಸಿಡ್ನಿ

ಆಸ್ಟ್ರೇಲಿಯಾ